593

# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ : 928 (1016)
2. ಮಾನ್ಯ ಸದಸ್ಯರ ಹೆಸರು : ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ) (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು
3. ಉತ್ತರಿಸುವ ದಿನಾಂಕ : 25/07/2024
4. ಉತ್ತರಿಸುವವರು : ಮಾನ್ಯ ಮುಖ್ಯ ಮಂತ್ರಿಗಳು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯಿಂದ ನಿಯೋಜನ ಮೇರೆಗೆ ಮೀಸಲಿರಿಸಿದ ಹುದ್ದೆಗಳನ್ನು ಹಂಚಿಕೆ ಮಾಡುವ ಕುರಿತು ಎಲ್ಲಾ ಇಲಾಖೆಗಳಿಗೆ ಅನ್ವಯವಾಗುವಂತೆ ಮಾರ್ಗಸೂಚಿಗಳನ್ನು ರಚಿಸಲಾಗಿದೆಯೇ; ಹಾಗಿದ್ದಲ್ಲಿ ಎಫ್‌ಡಿ/304/ಎಸ್ಎಡಿ/2011, ದಿನಾಂಕ: 30-10-2012ರ ಆದೇಶದ ಪ್ರತಿಯೊಂದಿಗೆ ಈ ಆದೇಶದಲ್ಲಿ ಓದಲಾಗಿರುವ ದಿನಾಂಕ: 24-09-2012ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ಸಭಾ ನಡವಳಿ ಪ್ರತಿ, ದಿನಾಂಕ: 30-09-2012ರಂದು ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ಅಡ್ವೊಕೇಟ್ ಜನರಲ್‌ರವರು ಸಲ್ಲಿಸಿರುವ ಮೆಮೋ ಪ್ರತಿ ಹಾಗೂ ಯು.ಓ. ನೋಟ್ ಸಂಖ್ಯೆ:ಡಿಪಿಎಆರ್/148/ಎಸ್ಆರ್‌ಡಿ/2012, ದಿನಾಂಕ: 18-10-2012ರ ಎಲ್ಲಾ ಪ್ರತಿಗಳನ್ನು ನೀಡುವುದು; | ಈ ಕೆಳಕಂಡ ಪ್ರತಿಗಳನ್ನು ಅಡಕಗೊಳಿಸಲಾಗಿದೆ.<br>• ಎಫ್‌ಡಿ/304/ಎಸ್ಎಡಿ/2011, ದಿನಾಂಕ: 30-10-2012.(ಅನುಬಂಧ-1)<br>• ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 24-09-2012ರಂದು ನಡೆದ ಸಭೆಯ ಸಭಾ ನಡವಳಿ ಪ್ರತಿ. (ಅನುಬಂಧ-2)<br>• ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಅಡ್ವೊಕೇಟ್ ಜನರಲ್‌ರವರು ದಿನಾಂಕ: 01-10-2012ರಂದು ಸಲ್ಲಿಸಿರುವ ಮೆಮೋ ಪ್ರತಿ. (ಅನುಬಂಧ-3)<br>• ಯು.ಓ.ನೋಟ್ ಸಂಖ್ಯೆ:ಡಿಪಿಎಆರ್/148/ಎಸ್ಆರ್‌ಡಿ/2012, ದಿನಾಂಕ: 18-10-2012ರ ಪ್ರತಿ (ಅನುಬಂಧ-4) |
| ಆ) | ಈ ಮಾರ್ಗಸೂಚಿಗಳಿದ್ದಾಗ್ಯೂ ಸಹ ಈ ಹುದ್ದೆಗಳನ್ನು ಹಂಚಿಕೆ ಮಾಡುವಲ್ಲಿ ತೊಡಕುಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ತೊಡಕುಂಟಾಗಲು ಕಾರಣಗಳೇನು; ಈ ತೊಡಕುಗಳನ್ನು ನಿವಾರಿಸಲು ಸರ್ಕಾರ ಪರಿಷ್ಕೃತವಾಗಿ ಆದೇಶವನ್ನು ಹೊರಡಿಸಲಾಗಿದೆಯೇ; ಹಾಗಿದ್ದಲ್ಲಿ, ಆಇ/216/ರಾಲೆಪ/2023, ದಿನಾಂಕ: 15-09-2023ರ ಆದೇಶದ ಪ್ರತಿಯೊಂದಿಗೆ ಈ ಆದೇಶದಲ್ಲಿ ಓದಲಾಗಿರುವ ದಿನಾಂಕ: 21-07-2023ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ಸಭಾ ನಡವಳಿ ಪ್ರತಿಯನ್ನು ನೀಡುವುದು. | ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಹುದ್ದೆಗಳನ್ನು ಹಂಚಿಕೆ ಮಾಡುವಲ್ಲಿ ತೊಡಕುಂಟಾಗಿರುವುದಿಲ್ಲ.<br>• ಆಇ/216/ರಾಲೆಪ/2023, ದಿನಾಂಕ: 15-09-2023. (ಅನುಬಂಧ-5)<br>• ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ಸಭಾ ನಡವಳಿ ದಿನಾಂಕ: 21-07-2023ರ ಪ್ರತಿಯನ್ನು ಒದಗಿಸಲಾಗಿದೆ. (ಅನುಬಂಧ-6) |

| | | |
|---|---|---|
| ಇ) | ಎಫ್‌ಡಿ/304/ಎಸ್‌ಎಡಿ/2011, ದಿನಾಂಕ: 30-10-2012ರ ಆದೇಶದ ಪ್ಯಾರಾ "ಇ" ನಲ್ಲಿ ಮತ್ತು ಆಇ/216/ರಾಲೆಪ/2023, ದಿನಾಂಕ: 15-09-2023ರ ಆದೇಶದ ಕ್ರಮ ಸಂಖ್ಯೆ:8ರಲ್ಲಿ ತಿಳಿಸಿರುವಂತೆ ಕಿರಿಯ ಲೆಕ್ಕ ಸಹಾಯಕರು, ಪ್ರಥಮ ದರ್ಜೆ ಲೆಕ್ಕ ಸಹಾಯಕರು ಮತ್ತು ಲೆಕ್ಕಾಧೀಕ್ಷಕರ ಹುದ್ದೆಗಳನ್ನು ಯಾವ ರೀತಿ ತುಂಬುವ ಬಗ್ಗೆ ತಿಳಿಸಲಾಗಿದೆ; ಮಾಹಿತಿ ನೀಡುವುದು; ಆದಾಗ್ಯೂ ಸಹ ಇತರೆ ಇಲಾಖೆಗಳಲ್ಲಿ ಮಂಜೂರಾದ ದಿನದಿಂದ ಇಲ್ಲಿಯವರೆಗೆ ಖಾಲಿ ಇರುವಂತಹ ಪ್ರಥಮ ದರ್ಜೆ ಲೆಕ್ಕ ಸಹಾಯಕರು ಮತ್ತು ಲೆಕ್ಕಾಧೀಕ್ಷಕರ ಹುದ್ದೆಗಳನ್ನು ತುಂಬಲು ಸಹಮತಿ ನೀಡದಿರಲು ಕಾರಣಗಳೇನು; | ಸರ್ಕಾರದ ಆದೇಶದಲ್ಲಿ ಶೇ.50ರಷ್ಟು ಹುದ್ದೆಗಳನ್ನು ಮೀರದಂತೆ ಅರ್ಹರಿರುವ ಅದೇ ಇಲಾಖೆಯ ಸಿಬ್ಬಂದಿಗಳಿಂದ ತುಂಬಲು ಅವಕಾಶ ಕಲ್ಪಿಸಲಾಗಿದೆ.<br><br>ಅಗತ್ಯವಿರುವ ಹುದ್ದೆಗಳನ್ನು ತುಂಬಲು ಕಾಲಕಾಲಕ್ಕೆ ಸಹಮತಿ ನೀಡಲಾಗುತ್ತಿದೆ. |
| ಈ) | ಇತರ ಇಲಾಖೆಗಳಲ್ಲಿ ಖಾಲಿ ಇರುವಂತಹ ಪ್ರಥಮ ದರ್ಜೆ ಲೆಕ್ಕ ಸಹಾಯಕರು ಮತ್ತು ಲೆಕ್ಕಾಧೀಕ್ಷಕರ ಹುದ್ದೆಗಳನ್ನು ತುಂಬುವ ಬಗ್ಗೆ ಮತ್ತು ಸಂಬಂಧಿಸಿದ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಈ ಹುದ್ದೆಗಳಿಗೆ ಅವಕಾಶ ಇಲ್ಲದೇ ಇದ್ದಲ್ಲಿ ಅವಕಾಶ ಕಲ್ಪಿಸುವ ಕುರಿತು ಸರ್ಕಾರದ ನಿಲುವೇನು / (ಮಾಹಿತಿ ನೀಡುವುದು). | ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯಲ್ಲಿ ಖಾಲಿ ಇರುವ ಲೆಕ್ಕಸಹಾಯಕರ 242 ಹುದ್ದೆಗಳನ್ನು ಹಾಗೂ 67 ಕಿರಿಯ ಲೆಕ್ಕಸಹಾಯಕರ ಹುದ್ದೆಗಳನ್ನು ತುಂಬಲು ಕರ್ನಾಟಕ ಲೋಕಸೇವಾ ಆಯೋಗದಿಂದ ಕ್ರಮಕೈಗೊಳ್ಳಲಾಗಿದೆ. |

ಸಂಖ್ಯೆ: ಆಇ 212 ರಾಲೆಪ 2024

(ಸಿದ್ದರಾಮಯ್ಯ)
ಮುಖ್ಯ ಮಂತ್ರಿ.